# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ , ಮೈಸೂರು

| | |
|---|---|
| ಎಸ್. ಸಿ. | 34/2018 |

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ಶ್ರೀ ನಾಗೇಶ್ | | ಪ್ರಮಾಣ ಮಾಡಿಸಿದ ದಿನಾಂಕ | |
| ತಂದೆ ಹೆಸರು | : ಲೇಟ್. ನಾಗರಾಜು | | 08.01.2021 | |
| ವಯಸ್ಸು | : 28 | ವರ್ಷ | | |
| ವೃತ್ತಿ | : ಆಟೋ ಚಾಲಕ | | PW: | 19 |
| ವಾಸಸ್ಥಳ | : ಕ್ಯಾತಮಾರನ ಹಳ್ಳಿ ಮೈಸೂರು | | CW: | 14 |

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

. ನಾನು ಕಳೆದ 7 ವರ್ಷಗಳಿಂದ ಕ್ಯಾತಮಾರನಹಳ್ಳಿಯಲ್ಲಿ ಆಟೋ ಚಾಲನೆ ಮಾಡುತ್ತಿದ್ದೇನೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳ ಪರಿಚಯ ಇಲ್ಲ. ಮಾರ್ಚ 2016 ರ ಮೊದಲನೇ ವಾರ ನಾನು ಬಸಪ್ಪಾಜೀ ಸರ್ಕಲ್ ಹತ್ತಿರ ಇರುವ ಪಾರ್ಕ ಒಳಗೆ ನಾನು ಹೋಗಿಲ್ಲ. ಘಟನೆ ಬಗ್ಗೆ ಮಾಹಿತಿ ಇಲ್ಲ ಮತ್ತು ನಾನು ತನಿಖಾಧಿಕಾರಿ ಸಮಕ್ಷಮ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ** ಸರ್ಕಾರಿ ಅಭಿಯೋಜಕರಿಂದಃ-

ಮಾರ್ಚ 2016 ರ ಮೊದಲನೇ ವಾರ ನಾನು ಬಸಪ್ಪಾಜೀ ಸರ್ಕಲ್ ಹತ್ತಿರ ಇರುವ ಪಾರ್ಕ ಒಳಗೆ ವಾಕಿಂಗ್ ಮಾಡಲು ಹೋದಾಗ ಪಾರ್ಕನ ಫೌಂಟೇನ್ ಪಕ್ಕದಲ್ಲಿದ್ದ ಒಂದು ಕಲ್ಲು ಬೆಂಚ್ ನ ಮೇಲೆ 3 ಜನರು ಅನುಮಾನಸ್ಪದವಾಗಿ ಕುಳಿತುಕೊಂಡು ಮಾತನಾಡುವ ಬಗ್ಗೆ ನಾನು ಕೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ವಲ್ಪ ದೂರ ಹೋಗುತ್ತಿದ್ದ ಹಾಗೇ ಹಿಂದೂ ಸಂಘಟನೆರವರಿಗೆ ತುಂಬಾ ಜಾಸ್ತಿ ಆಗಿದೆ ಅವರಿಗೆ ಒಂದು ಗತಿ ಕಾಣಿಸಬೇಕು, ಅದರಲ್ಲೂ ಆರ್.ಎಸ್.ಎಸ್.ನ ರಾಜುವಿನಿಂದ ನಮ್ಮ ಮುಸ್ಲಿಂಮರಿಗೆ ತೊಂದರೆಯಾಗುತ್ತಿದೆ.

ಹೇಗಾದರೂ ಮಾಡಿ ಆತನನ್ನು ಹೊಡೆದು ಹಾಕಬೇಕು ಎಂದು ಮಾತನಾಡಿದ್ದನ್ನು ನಾನು ಕೇಳಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ನಿ.ಪಿ.29 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 23.08.2016 ರಂದು ನನ್ನನ್ನು ಸಿ.ಸಿ.ಬಿ. ಪೊಲೀಸ್ ಅಧಿಕಾರಿಯವರು ತಮ್ಮ ಕಛೇರಿಗೆ ಕರೆಸಿ ತಮ್ಮ ವಶದಲ್ಲಿದ್ದ 1 ರಿಂದ 3 ನೇ ಆರೋಪಿಗಳನ್ನು ನನಗೆ ತೋರಿಸಿದ ಮೇರೆಗೆ ನಾನು ಗುರುತಿಸಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿಗಳು ಪಾರ್ಕ ನಲ್ಲಿ ಕುಳಿತು ಮಾತನಾಡುತ್ತಿದ್ದ ಬಗ್ಗೆ ನಾನು ಗರುತಿಸಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ನಿ.ಪಿ.30 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ 1 ರಿಂದ 3 ನೇ ಆರೋಪಿಗಳನ್ನು ಗುರುತಿಸಿಲ್ಲ ಎಂದು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ರಿಂದ 5 ನೇ ಆರೋಪಿಗಳ ಪರ ವಕೀಲರಿಂದ ಪಾಟೀ ಸವಾಲು ಇಲ್ಲ.**

**ಮರುವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ ಒ.,**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,**
**ಮೈಸೂರು.**